# 1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ

## Spl.C.92/2020

ದಿಃ 25.02.2022

(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Cw-6 Pw-9

| | | |
|---|---|---|
| ಹೆಸರು | ಃ | ಪದ್ಮ |
| ಗಂಡನ ಹೆಸರು | ಃ | ಚುಂಚಯ್ಯ |
| ವಯಸ್ಸು | ಃ | 34 ವರ್ಷ |
| ಉದ್ಯೋಗ | ಃ | ಆಶಾ ಕಾರ್ಯಕರ್ತೆ |
| ವಾಸಸ್ಥಳ | ಃ | ವಿರೂಪಾಕ್ಷಿಪುರ,<br>ಚನ್ನಪಟ್ಟಣ ತಾಲ್ಲೂಕು |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ನನಗೆ ಚಾಸಾ.1ರಿಂದ 5, 7 ಮತ್ತು 8ರವರು ಗೊತ್ತು. ಚಾಸಾ.7 ನನ್ನ ಪತಿ. ನ್ಯಾಯಾಲಯದ ಮುಂದಿರುವ ಆರೋಪಿಗಳು ಮತ್ತು ಗೈರು ಹಾಜರಿರುವ ಆರೋಪಿ ಗೊತ್ತು.

2. ದಿಃ25.02.2020ರಂದು ಸಂತೆಮೊಗೇನಹಳ್ಳಿ ಗ್ರಾಮದ ವ್ಯಾಪ್ತಿಯಲ್ಲಿ ಚಾಸಾ.1ರವರು ಜಮೀನಿನಲ್ಲಿ ಹದ್ದುಬಸ್ತಿಗಾಗಿ ಕಲ್ಲುಗಳನ್ನು ನೆಡಲು ನಾನು, ಚಾಸಾ.1ರಿಂದ 5, 7 ಮತ್ತು 8ರವರು ಬೆಳಿಗ್ಗೆ ಹೋಗಿದ್ದೆವು. ನಾವು ಕಲ್ಲು ನೆಟ್ಟು ಸಂಜೆ 7.00 ಗಂಟೆ ಸಮಯದಲ್ಲಿ ಹೋಗುತ್ತಿದ್ದಾಗ 3 ಜನ ಆರೋಪಿಗಳು ಮತ್ತು ಇತರೆ ಸುಮಾರು 15 ಜನ ಬಂದು ಜಗಳ ಪ್ರಾರಂಭಿಸಿದರು. ನೀವು ಏನು ಮಾಡುತ್ತಿದ್ದೀರಾ, ಏನು ಕಟ್ಟುತ್ತಿದ್ದೀರಾ ಎಂದು, ಎಸ್ ಸಿ ಜನಾಂಗದವ ರು ಇಲ್ಲಿ ಬರುವಂತಿಲ್ಲ, ಬಂದರೆ ಸಾಯಿಸಿಬಿಡುತ್ತೇವೆಂದು ಬೋಳಿ ಮುಂಡೇರಾ

ಎಂದು ಬೈದು ಬೆದರಿಕೆ ಹಾಕಿದರು. 1ನೇ ಆರೋಪಿ ಚಾಸಾ.1ರವರಿಗೆ ಹೊಡೆಯಲು ಹೋದಾಗ ಚಾಸಾ.4ರವರು ಬಿಡಿಸಲು ಅಡಡ ಬಂದಿದ್ದು ಅವರಿಗೆ ಕತ್ತಿನ ಮೇಲೆ ಹೊಡೆದಿದ್ದು, ಅವರನ್ನು ಬಿಡಿಸಲು ಚಾಸಾ.2, 3 ಮತ್ತು 5ರವರು ಹೋದಾಗ ಆರೋಪಿಗಳು ಅವರನ್ನೂ ತಳ್ಳಿ ಕೆಟ್ಟ ಕೆಟ್ಟದಾಗಿ ನೀವು ಕೀಳು ಜಾತಿಯವರು ಎಂದೆಲ್ಲಾ ಬೈದಿರುತ್ತಾರೆ. ಯಾರಾದರೂ ಕಾಲು ಇಟ್ಟರೆ ಸಾಯಿಸಿಬಿಡುತ್ತೇವೆಂದು ಬೆದರಿಕೆ ಹಾಕಿದರು. ನಂತರ ಅಲ್ಲಿಂದ ಬಿಡಿಸಿಕೊಂಡು ನಾವು ಮನೆಗೆ ಹಿಂದಿರುಗಿದೆವು. ನಂತರವೂ ನಾವು ಮನೆಗೆ ಹೋಗಿ ಸುಮ್ಮನಿದ್ದೆವು. ನಂತರ ರಾತ್ರಿ ಗಂಟೆಯಲ್ಲಿ ಆರೋಪಿಗಳು ಹದ್ದುಬಸ್ತಿಗೆ ಹಾಕಿದ್ದ ಕಲ್ಲುಗಳನ್ನು ಒಡೆದು ಹಾಕಿದ್ದು ತಿಳಿಯಿತು. ಆರೋಪಿಗಳೇ ಕಲ್ಲು ಒಡೆದು ಹಾಕುತ್ತೇವೆಂದು ಗಲಾಟೆಯ ಸಮಯದಲ್ಲಿ ಹೇಳುತ್ತಿದ್ದರು.

3. ಚಾಸಾ.1 ಮತ್ತು 2ರವರು ಗೌಡ ಜನಾಂಗದವರು. ನಾನು ಮತ್ತು ಚಾಸಾ.3 ಎಸ್ ಸಿ ಜನಾಂಗದವರು. ಆರೋಪಿಗಳು ಗೌಡ ಜನಾಂಗದವರು. ಆರೋಪಿಗಳಿಗೆ ನಾವು ಯಾವ ಜನಾಂಗ ಎಂದು ಗೊತ್ತು.

<u>ಪಾಟೀ ಸವಾಲುಃ ಶ್ರೀ. ಬಿ.ಸಿ.ವಿ., ವಕೀಲರಿಂದ ಆರೋಪಿಗಳ ಪರವಾಗಿಃ</u>

ನಾನು ಸುಮಾರು 10 ವರ್ಷದಿಂದ ಆಶಾ ಕಾರ್ಯಕರ್ತೆಯಾಗಿ ಕೆಲಸ ಮಾಡುತ್ತಿದ್ದೇನೆ. ನಾನು ಕೋಡಂಬಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕೆಲಸ ಮಾಡುತ್ತಿದ್ದೇನೆ. ನನಗೆ ಸರ್ಕಾರದಿಂದ ಮಾಸಿಕ ಗೌರವದನ ಬರುತ್ತದೆ ಎನ್ನುವುದು ಸರಿ. ವಿರೂಪಾಕ್ಷಿಪುರ ಗ್ರಾಮ ನನ್ನ ವ್ಯಾಪ್ತಿಗೆ ಬರುತ್ತಿತ್ತು. ಮಹಿಳೆಯರು, ಮಕ್ಕಳು, ಆರೋಗ್ಯ ಸೇವೆ ಅವಶ್ಯವಿರುವವರಿಗೆ ಸರ್ಕಾರಿ ಸೌಲಭ್ಯಗಳನ್ನು ಒದಗಿಸುವ ಕೆಲಸಗಳನ್ನು ಮಾಡುತ್ತಿದ್ದೆವು. ನಮಗೆ ವಾರದ 7 ದಿನವೂ ಕೆಲಸದ ದಿನಗಳಿದ್ದು ರಜಾ ಇಲ್ಲ ಎನ್ನುವುದು ಸರಿ. ನಮ್ಮ ಆಸ್ಪತ್ರೆಯಲ್ಲಿ ಮೇಲ್ವಿಚಾರಕರು ಇದ್ದಾರೆ ಎನ್ನುವುದು ಸರಿ. ಅವರು ಟಿ.ಹೆಚ್.ಒ. ಆಗಿರುತ್ತಾರೆ. ನಾನು ಕೆಲಸಕ್ಕೆ ಬೆಳಿಗ್ಗೆ 10.00 ಗಂಟೆಗೆ ಹಾಜರಾಗುತ್ತೇನೆ. ಯಾವುದೇ ಹಾಜರಾತಿ ರಿಜಿಸ್ಟರ್ ಇರುವುದಿಲ್ಲ. ಸಾಮಾನ್ಯವಾಗಿ ಕೆಲಸ ಮುಗಿಸಿ ಸಂಜೆ 4.00 ಗಂಟೆ ವೇಳೆಗೆ ವರದಿ ಮಾಡುತ್ತೇವೆ.

2. ನಾವು ಕೆಲಸಕ್ಕೆ ಹಾಜರಾಗದೇ ಹೊರಗೆ ಹೋದಾಗ ನಮ್ಮ ಆಸ್ಪತ್ರೆಯಲ್ಲಿ ಮೇಲ್ವಿಚಾರಿಗೆ ತಿಳಿಸಿ ಅನುಮತಿ ಪಡೆಯಬೇಕು ಎನ್ನುವುದು ಸರಿ. ಘಟನೆಯ ದಿನದಂದು ನಾನು ರಜಾ ಹಾಕಿದ್ದೆ. ಆ ವಿಷಯವಾಗಿ ನಾನು ಪೊಲೀಸರಿಗೆ ಯಾವುದೇ ದಾಖಲೆ ನೀಡಿಲ್ಲ. ಘಟನೆಯ ದಿನ ಯಾವ ವಾರ ಇತ್ತು ಎಂದು ನೆನಪಿಲ್ಲ. ಆ ದಿನದಂದು ನಾನು ಕೆಲಸಕ್ಕೆ ಹಾಜರಾಗಿ ಹಾಜರಾತಿ ಸಹಿ ಮಾಡಿದ್ದೆ ಎನ್ನುವುದು ಸರಿಯಲ್ಲ.

3. ನಾನು ಮತ್ತು ನನ್ನ ಪತಿ ಧರ್ಮಪರಿವರ್ತನೆ ಹೊಂದಿಲ್ಲ, ಬದಲಾಗಿ ಸುಮಾರು 8 ವರ್ಷಗಳಿಂದ ಚಾಸಾ.1ರವರ ಚರ್ಚ್ ಗೆ

ಪ್ರಾರ್ಥನೆಗಾಗಿ ಹೋಗಿ ಬರುತ್ತೇವೆ. ಅದೇ ಚರ್ಚ್ ನಲ್ಲಿಯೇ ಚಾಸಾ.2 ರಿಂದ 5 ಮತ್ತು 8 ರವರು ಪರಿಚಯವಾಗಿರುತ್ತಾರೆ ಎನ್ನುವುದು ಸರಿ.

4. ಚಾಸಾ.1 ರವರು ಜಮೀನನ್ನು ಚರ್ಚ್ ಕಟ್ಟಲು ಖರೀದಿಸಿದ್ದರು ಎನ್ನುವುದು ಸರಿಯಲ್ಲ. ಅವರು ಅನಾಥಾಶ್ರಮ ಕಟ್ಟಲು ಖರೀದಿಸಿದ್ದರು ಎಂದು ಸಾಕ್ಷಿ ನುಡಿಯುತ್ತಾರೆ.

5. ನಮ್ಮ ಊರಲ್ಲಿ ಸುಮಾರು 150 ದಲಿತರ ಮನೆಗಳು ಇವೆ. ಅವರಲ್ಲಿ ಸುಮಾರು 4 ಮನೆಯವರು ಚರ್ಚ್ ಗೆ ಪ್ರಾರ್ಥನೆಗಾಗಿ ಹೋಗುತ್ತಾರೆ. 4 ಮನೆಯವರು ಬೇರೆ ಬೇರೆ ಕಡೆ ಚರ್ಚ್ ಗೆ ಹೋಗುತ್ತಿದ್ದರು. ನಾನು ಮತ್ತು ಚಾಸಾ.1, 2 ಗ್ರಾಮದ ಇತರರನ್ನು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರ ಹೊಂದುವಂತೆ ಹೇಳುತ್ತಿದ್ದೆವು ಎನ್ನುವುದು ಸರಿಯಲ್ಲ. ಆ ವಿಷಯವಾಗಿ ನಮ್ಮ ಮೇಲೆ ಗ್ರಾಮಸ್ಥರು 1 ನೇ ಆರೋಪಿ ಮತ್ತು ಊರಿನ ಮುಖಂಡರಿಗೆ ದೂರು ನೀಡಿದ್ದರು ಎನ್ನುವುದು ಸರಿಯಲ್ಲ.

6. ನಾವು ಏಸು ದೇವರನ್ನು ಆರಾಧನೆ ಮಾಡುತ್ತೇವೆ. 1 ನೇ ಆರೋಪಿ ಮತ್ತು ಇತರರು ನಾವು ಚಾಸಾ.1 ರವರ ಜಮೀನಲ್ಲಿ ಕಲ್ಲು ಹಾಕಿ ಬರುತ್ತಿದ್ದ ಸಮಯದಲ್ಲಿ ಸಂಜೆ ಅವಾಚ್ಯ ಶಬ್ದದಿಂದ ನಿಂದಿಸಿ, ಜಾತಿ ಹಿಡಿದು ಬೈದು ನಮ್ಮ ಮೇಲೆ ಹಲ್ಲೆ ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಈ ದಿನ ನ್ಯಾಯಾಲಯಕ್ಕೆ ಚಾಸಾ.1 ಮತ್ತು 2 ರವರೂ ಸಹ ಬಂದಿರುತ್ತಾರೆ ಎನ್ನುವುದು ಸರಿಯಲ್ಲ.

7. ನಮ್ಮ ಊರಿಂದ ಅಕ್ಕೂರು ಠಾಣೆ ಸುಮಾರು 4-5 ಕಿಮೀ ಇದೆ. ಘಟನೆಯ ದಿನ ಠಾಣೆಗೆ ಹೋಗಿ ದೂರು ನೀಡಲು ಯತ್ನಿಸಲಿಲ್ಲ. ಮಾರನೇ ದಿನವೂ ದೂರು ನೀಡಲು ಯತ್ನಿಸಲಿಲ್ಲ ಎಂದರೆ ಸಂಜೆ ಚಾಸಾ.1 ರವರು ನೀಡಿರುತ್ತಾರೆ. ನಾನು ಠಾಣೆಗೆ ಹೋಗಿದ್ದು ಘಟನೆಯ ಬಗ್ಗೆ ಹೇಳಿರುತ್ತೇನೆ. ಪೊಲೀಸರು ಅದನ್ನು ಬರೆದುಕೊಂಡಿರುತ್ತಾರೆ. ನಾನು ನನ್ನ ಮೇಲಧಿಕಾರಿಗಳಿಗೆ ಘಟನೆಯ ಬಗ್ಗೆ ತಿಳಿಸಿರಲಿಲ್ಲ.

8. ನಾವುಗಳು ವಾರಕ್ಕೊಮ್ಮೆ ಮತ್ತು ಆಗಾಗ ಸದರಿ ಜಮೀನಲ್ಲಿ ಸೇರಿ ಮದ್ಯಪಾನ ಮಾಡುವುದು, ಕುಣಿಯುವುದು ಮತ್ತು ಗಲಾಟೆ ಮಾಡುವುದು ಮಾಡುತ್ತಿದ್ದೆವು ಎನ್ನುವುದು ಸರಿಯಲ್ಲ. ಆ ವಿಷಯವಾಗಿ ಗ್ರಾಮಸ್ಥರು ಗಾಮ ಪಂಚಾಯ್ತಿ ಅಧ್ಯಕ್ಷ 1ನೇ ಆರೋಪಿಗೆ ಮತ್ತು ಇತರೆ ಊರಿನ ಮುಖಂಡರಿಗೆ ನಮ್ಮ ವಿರುದ್ದ ದೂರು ನೀಡಿದ್ದರು ಎನ್ನುವುದು ಸರಿಯಲ್ಲ. ಅದೇ ರೀತಿಯಾಗಿ ನಾವುಗಳೆಲ್ಲರೂ ಮಾತನಾಡಿಕೊಂಡು ಒಂದು ಸೃಷ್ಟಿತ ಘಟನೆಯ ಮೂಲಕ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಮರುಳಸಿದ್ದಾರಾಧ್ಯ ಹೆಚ್.ಜೆ)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.